the talk of the town of the city Municipality. In the Council. they showed a letter from the Deputy Chief Minister...

MR. SPEAKWER : You should be give a Notice in advance so that I can convey it to the Hon'ble Minister. You cannot get up and raise it....

SRI S. RAJENDRAN : It has become an urgent matters

(INTERRUPTIONS)

MR. SPEKAER : For the other members who have given notice in advance. I have not been able to permit. I have told them that I would permit them tomorrow.

SRI S. RAJENDRAN : It has come in the newspapers.....

MR. SPEAKER : There is no urgency. We will take up.

SRI S. RAJENDRAN : In the city Municapal Council, it is the talk of the town.

MR. SPEAKER : We will take it up tommorrow. We will have some time limit.

ನಿಯಮ 69 ರ ಮೇರೆಗೆ

ಕೃಷ್ಣ ಮೇಲ್ದಂಡೆ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಆಲಮಟ್ಟಿ ಡ್ಯಾಂ ನಾರಾಯಣಪುರ ಬಲದಂಡೆ ಕಾಲುವೆ, ಇಂಡಿ ಹಾಗೂ ಜೇವರ್ಗಿ ಬಾಂಡ್ ಕಾಲುವೆಗಳ ಕಾಮಗಾರಿ ಕೆಲಸ ಸ್ಥಗಿತಗೊಂಡಿರುವುದು

ಅಧ್ಯಕ್ಷರು : ಮಾನ್ಯ ಖರ್ಗೆಯವರೆ ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಚರ್ಚೆ ಪ್ರಾರಂಭ ಮಾಡಿ.

ಶ್ರೀ ಕೆ.ಎನ್. ನಾಗೇಗೌಡ : ತಾವೇನು ಅಜೆಂಡಾದಲ್ಲಿ ಇದರ ಬಗ್ಗೆ ಹಾಕಿದ್ದೀರಿ ಅದರಲ್ಲಿ ಎರಡು ಅಂಶಗಳ ಬಗ್ಗೆ ನಾನು ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿ ಎಸ್ಟಿಮೇಟ್ ಸಮಿತಿಯ ವರದಿಯ ಬಗ್ಗೆ ಚರ್ಚೆ ಮಾಡುವಂತಿಲ್ಲವೆಂದು ಹೇಳಿದ್ದೆ.

ಅಧ್ಯಕ್ಷರು : ಅಲ್ಲಿನ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ ಮಾತನಾಡಲು ನೋಟೀಸನ್ನು ಅವರು ನನಗೆ ಕೊಟ್ಟಿದ್ದಾರೆ. ಅಂದಾಜು ಸಮಿತಿಯ ವರದಿಯಾಗಲಿ ಇತರೇ ಸಮಿತಿಯ ವರದಿಯಾಗಲಿ ಚರ್ಚೆ ಮಾಡುವ ಸಂಪ್ರದಾಯ ಸದನದಲ್ಲಿ ಇಲ್ಲ. ತಾವು ಆ್ಯಂಟಿಸಿಪೇಟ್ ಮಾಡಿ ಏನನ್ನೂ

ಹೇಳಬೇಕಾಗಿಲ್ಲ. ನಿಯಮಗಳಿಗೆ ವಿರುದ್ಧವಾಗಿ ಮಾತನಾಡಿದರೆ ನಾನು ಅವರಿಗೆ ಗೈಡ್ ಮಾಡುತ್ತೇನೆ. ಅದರಲ್ಲಿ ತೊಂದರೆಯೇನಿಲ್ಲ. ಮಾನ್ಯ ಖರ್ಗೆಯವರೇ ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋದ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸದನದ ಗಮನಕ್ಕೆ ಮುಖ್ಯಮಂತ್ರಿಯವರು ಹಾಗೂ ನೀರಾವರಿ ಸಚಿವರ ಗಮನಕ್ಕೆ ತರುವುದೇನೆಂದರೆ, ಕೃಷ್ಣಾ ಮೆಲ್ದಂಡೆ ಯೋಜನೆಯಲ್ಲಿ ನಡೆಯುತ್ತಿರುವ ಕಾಮಗಾರಿಯ ಕೆಲಸ ಸ್ಥಗಿತಗೊಂಡಿದೆ. ಕೆಲಸ ಮಂದಗತಿಯಲ್ಲಿದೆ. ಕೆಲವು ಕಡೆಗಳಲ್ಲಿ ವ್ಯಾಜ್ಯಗಳಿಂದಾಗಿ ಅಥವಾ ಅಂದಾಜು ಸರಿಯಾಗಿ ಇಲ್ಲದ ಕಾರಣ ಕೆಲಸ ನಿಂತುಹೋಗಿರತಕ್ಕ ಪರಿಸ್ಥಿತಿಯನ್ನು ಕಾಣಬಹುದು. ಸರ್ಕಾರ ಈ ಸದನದ ಮುಂದೆ ತನ್ನ ವಾದವನ್ನು ಎಷ್ಟೇ ತರಾತುರಿಯಲ್ಲಿ ಇಟ್ಟರೂ ಅಲ್ಲಿನ ವಾಸ್ತವಿಕವಾದ ಸ್ಥಿತಿ ಹೇಗಿದೆಯೆಂದರೆ ಹಿಂದೆ ಯಾವ ವೇಗದಿಂದ ಕೆಲಸವಾಗಿತ್ತು ಅದು ಸುಮಾರು 6-7 ತಿಂಗಳುಗಳಿಂದ ಸ್ಥಗಿತವಾಗಿದೆ ಎಂಬ ಮಾತನ್ನು ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಅವರು ಹಣವನ್ನು ಖರ್ಚು ಮಾಡಿರುವ ಬಗ್ಗೆ ಹೇಳಬಹುದು. ಆ ರೀತಿ ಹಣವನ್ನು ಖರ್ಚು ಮಾಡತಕ್ಕದ್ದು, ಬಿಲ್ಲನ್ನು ಕೊಡತಕ್ಕದ್ದು ಈ ಹಿಂದೆ ಆಗಿರುವ ಕಾಮಗಾರಿಗಳದ್ದಾಗಿರಬಹುದೇ ಹೊರತು, ಯಾವ ವೇಗದಿಂದ ಕೆಲಸವಾಗಬೇಕಾಗಿತ್ತೊ, ಎರಡು ಸಾವಿರ ಇಸವಿಯೊಳಗಾಗಿ ಕೃಷ್ಣಾಬೇಸಿನ್‌ನಲ್ಲಿ ನಮಗೆ ಅಲೋಕೇಷನ್ ಆದಂಥ 734 ಟಿ.ಎಂ.ಸಿ ನೀರನ್ನು, ಅದರಲ್ಲಿ ಮದ್ರಾಸ್ ನಗರಕ್ಕೆ ಕುಡಿಯುವ ನೀರಿನ ಉದ್ದೇಶಕ್ಕಾಗಿ 5 ಟಿ.ಎಂ.ಸಿ. ನೀರನ್ನು ಕೊಡಲು ಏನು ಒಪ್ಪಿಕೊಂಡಿದ್ದೇವೆ ಅದನ್ನು ಬಿಟ್ಟರೂ ಉಳಿದ 729 ಟಿ ಎಂ ಸಿ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಎರಡು ಸಾವಿರ ಇಸವಿಯೊಳಗೆ ಆ ಕೆಲಸವಾಗುವುದಿಲ್ಲವೆಂಬುದನ್ನು ನಾವೆಲ್ಲರೂ ಪ್ರಾಕ್ಟಿಕಲಿ ಒಪ್ಪಿಕೊಳ್ಳಬೇಕಾಗುತ್ತದೆ. ಬಹಳ ಹೆಚ್ಚೆಂದರೆ ನಾವು ಆ ನೀರನ್ನು ಸಂಗ್ರಹಿಸಿಕೊಳ್ಳತಕ್ಕ ಕೆಲಸವನ್ನು ಮಾಡಬಹುದು. ಆ ರೀತಿ ಸಂಗ್ರಹ ಮಾಡುವ, ಬಳಕೆ ಮಾಡುವಲ್ಲಿ ಆಗಬೇಕಾದ ಕೆಲಸಗಳು ಕಳೆದ 4-5 ತಿಂಗಳಿನಿಂದ ಬಹಳ ಮಂದಗತಿಯಲ್ಲಿ ಆಗುತ್ತಿದೆ. ಇಲ್ಲವೇ ಕೆಲಸವೇ ನಿಂತುಹೋಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇದು ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಮಾನ್ಯ ನಾಗೇಗೌಡರಿಗೂ ಗೊತ್ತಿದೆ. ಇದರ ಬಗ್ಗೆ ಮೊನ್ನೆ ಮಾನ್ಯ ನಂಜೇಗೌಡರು ಪ್ರಸ್ತಾಪ ಮಾಡಿದಾಗ ಮಾನ್ಯ ನಾಗೇಗೌಡರು ಕೆಲಸಗಳು ಭರದಿಂದ ಸಾಗಿದೆ, ಸಾಕಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಫೈನಾನ್‌ಷಿಯಲ್ ಟಾರ್ಗೆಟ್ ಎಷ್ಟು ಇತ್ತು, ಎಷ್ಟು ರೀತಿಯಾಗಿ ಹಣವನ್ನು ಬಿಡುಗಡೆ ಮಾಡಿದ್ದೇವೆ, ಎಷ್ಟು ಬಿಡುಗಡೆ ಮಾಡಿದ್ದೇವೆ ಎಂಬ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಆದರೆ ಭೌತಿಕ ಸಾಧನೆ ಮಾಡುವಲ್ಲಿ ತಾವು ವಿಫಲರಾಗಿದ್ದೀರಿ ಎಂಬುದನ್ನು ತಾವೊಬ್ಬರು ಒಪ್ಪಿಕೊಳ್ಳುತ್ತಿಲ್ಲ. ಆದರೆ ಪದೇ ಪದೇ ನಾವೇನು ಆರ್ಥಿಕ ಗುರಿಯನ್ನಿಟ್ಟುಕೊಂಡಿದ್ದೇವೆ, ಹಣವನ್ನು ಹೆಚ್ಚು ಸಂಗ್ರಹಣ ಮಾಡಿದ್ದೇವೆ ಅದರ ಬಗ್ಗೆ ಹೇಳುತ್ತೀರಿ. ಮಾನ್ಯ ಸಿದ್ದರಾಮಯ್ಯನವರು ಅದೇ ಮಾತನ್ನು ಮೊನ್ನೆ ರಾಮಚೂರಿನಲ್ಲಿ ಹೇಳಿದ್ದಾರೆ. ಈ ಹಿಂದೆ 25-26 ವರ್ಷಗಳಲ್ಲಿ ಯಾವುದೇ ಸರ್ಕಾರಗಳು ಈ ಯೋಜನೆಗಾಗಿ ಖರ್ಚು ಮಾಡಿದಷ್ಟು ಹಣವನ್ನು ನಮ್ಮ ಸರ್ಕಾರ ಕೇವಲ ಎರಡು ವರ್ಷಗಳಲ್ಲಿ ಸಾವಿರಾರುಕೋಟಿ ಹಣವನ್ನು ಖರ್ಚು ಮಾಡಿದ್ದೇವೆ, ಇದೇ ನಮ್ಮ

ಸಾಧನೆಯೆಂದು ಅವರು ಹೇಳಿದ್ದಾರೆ. ಪ್ರತಿ ವರ್ಷ ಎಷ್ಟು ಹಣ ಖರ್ಚು ಮಾಡಿದ್ದೀರಿ ಭೌತಿಕ ಸಾಧನೆಯ ಬಗ್ಗೆ ಕಳೆದ ಇಪ್ಪತ್ತು ವರ್ಷಗಳ ಪಟ್ಟಿಯನ್ನು ತಾವೇ ಕೊಟ್ಟಿದ್ದೀರಿ ಅದನ್ನು ನೋಡಿದರೆ ತಮಗೆ ಇದರ ಬಗ್ಗೆ ಅರಿವಾಗುತ್ತದೆ. ಈ ಹಿಂದೆ ಯಾವುದೇ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಾಗ ಅವುಗಳು ಪೂರ್ಣಗೊಂಡಿರಲಿಲ್ಲ. ಅದು ಕಾವೇರಿ, ಹೇಮಾವತಿ, ಹಾರಂಗಿ, ಕೆ.ಆರ್.ಎಸ್.ನ ವಿ.ಸಿ. ನಾಲೆ ವರುಣಾ ನಾಲೆ ಅಥವಾ ಮತ್ತಾವುದೇ ನೀರಾವರಿ ಯೋಜನೆಗಳು ಇರಬಹುದು, ಅವುಗಳಿಗ್ಯಾವುದಕ್ಕೂ ಪ್ಲಾನ್‌ನಲ್ಲಿ ಹಣವನ್ನು ಒದಗಿಸತಕ್ಕದ್ದು ಅಥವಾ ಯಾವುದೇ ಕಾರ್ಪೊರೇಷನ್‌ಗಳಿಂದ ಹಣವನ್ನು ಸಂಗ್ರಹ ಮಾಡಿ ಕೊಡತಕ್ಕದ್ದು ಇರಲಿಲ್ಲ. ಅದನ್ನು ಮಾಡಿದ್ದು, ಕಾನೂನನ್ನು ತಂದಿದ್ದು, ಇಂದಿನ ಸರ್ಕಾರ ಎನ್ನತಕ್ಕದ್ದು ತಮಗೂ ಗೊತ್ತಿದೆ. ಹಿಂದಿನ ಸರ್ಕಾರಗಳು ನೀರಾವರಿ ಯೋಜನೆಗಳಿಗೆ ನಾನ್‌ಪ್ಲಾನ್‌ನಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದವು. ಆದರೆ ಕೃಷ್ಣಾ ಮೇಲ್ದಂಡೆ ಕಾಮಗಾರಿಗಳಿಗಾಗಿ ಪ್ಲಾನ್‌ನಲಿ ಮತ್ತು ಕೃಷ್ಣಾ ಜಲಭಾಗ್ಯ ನಿಗಮದಿಂದ ಬಂದ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಹೆಚ್ಚು ಕಮ್ಮಿ ಹದಿನೆಂಟು ಪರ್‌ಸೆಂಟ್ ಬಡ್ಡಿ ಕೊಟ್ಟು ಹಣವನ್ನು ಸಂಗ್ರಹಣೆ ಮಾಡಿದ್ದೇವೆ. ಈ ಯೋಜನೆಗಾಗಿ ನಮ್ಮ ಹತ್ತಿರ ಎಷ್ಟು ಹಣವಿದೆ ಎಂಬ ಬಗ್ಗೆ ತಾವು 8ನೇ ತಾರೀಖು ಹುಬ್ಬಳ್ಳಿಯಲ್ಲಿ ಒಂದು ಸ್ಟೇಟ್ ಮೆಂಟ್ ಕೊಟ್ಟಿದ್ದೀರಿ. ಅದೇನೆಂದರೆ "The Problems were no longer a problem with the setting up of Krishna Jala Bhagya Nigam in which he said Rs.1480 crores of which Rs. 400 crores had been raised. It was decided to raise a fresh drench of Rs.800 Crores had already been raised." ಅಂದರೆ 1480 ಕೋಟಿ, ಕೃಷ್ಣ ಜಲಭಾಗ್ಯ ನಿಗಮದಲ್ಲಿ ಎತ್ತಿರುವ 800 ಕೋಟಿ ರೂಪಾಯಿಗಳು ಪ್ರತಿ ದಿನ ತಾವು ಕೊಡತಕ್ಕ ಬಡ್ಡಿ 18 ಪರ್‌ಸೆಂಟ್‌ನಂತೆ ಹೆಚ್ಚು ಕಮ್ಮಿ ಒಂದು ಕೋಟಿಯಾಗುತ್ತದೆ. ಒಟ್ಟಾರೆ 2280 ಕೋಟಿ ರೂಪಾಯಿಗಳನ್ನು ನಿಮ್ಮ ನಿಗಮದಲ್ಲಿನ ರಿಜರ್ವ್‌ಫಂಡ್‌ನಲ್ಲಿದೆ. ಇದಕ್ಕೆ ಅಂದರೆ 380 ಕೋಟಿ ರೂ ವರ್ಷಕ್ಕೆ ಬಡ್ಡಿಯೇ ಆಗುತ್ತದೆ. ಆದರೆ ತಾವು ಕೃಷ್ಣ ಜಲಭಾಗ್ಯ ನಿಗಮದಿಂದ ಹಣವನ್ನು ಬಿಡುಗಡೆ ಮಾಡಿ ಖರ್ಚು ಮಾಡುವುದನ್ನು ನೋಡಿದರೆ ಅದು ಸರಿಯೆಂದು ತಾವು ಒಪ್ಪಿಕೊಳ್ಳುವುದಾದಾರೆ ತಾವು ಏನು ಹೇಳಿದರೂ ಒಪ್ಪಿಕೊಳ್ಳಲು ನಾನು ತಯಾರಾಗಿದ್ದೇನೆ. ಇದು ಸರಿಯೆಂದು ತಾವು ನಿಷ್ಪಕ್ಷಪಾತವಾಗಿ ಹೇಳಬೇಕು. ತಾವು ಮಾಡಿರುವುದು ತಪ್ಪಾಗಿದೆ ಎಂಬುದಕ್ಕೆ ಸಾಕ್ಷಿಯಾಗಿ, 13, 25ನೇ ತಾರೀಖಿನ ಎರಡು ಸರ್ಕಾರದ ಆದೇಶಗಳನ್ನು ತರಾತುರಿಯಲ್ಲಿ ತಂದು 400 ಕೋಟಿ ರೂಪಾಯಿಗಳ ಗುತ್ತಿಗೆಯನ್ನು ತುಂಡು ಗುತ್ತಿಗೆದಾರರಿಗೆ ಪೀಸ್ ವರ್ಕ್ ಆಧಾರದ ಮೇಲೆ ಕೊಟ್ಟಿರಿ ಇದು ಅನ್ಯಾಯ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆಯೆಂದು ನಾವು ಹೇಳಿದ್ದೇವೆ. ಈಗ ನಮಗೆ ಇದಕ್ಕೊಂದು ಸಾಮರ್ಥನೆ ಸಿಕ್ಕಿದೆ. ಬಹಳ ದಕ್ಷರೂ, ಪ್ರಾಮಾಣಿಕರೂ ಆದ ಶ್ರೀಮಾನ್ ವೈಜನಾಥ್ ಪಾಟೀಲ್‌ರವರು ನಮ್ಮ ಅಪಾದನೆಗೆ ಸಮರ್ಥನೆ ಮಾಡಿ ಈ ಸದನಕ್ಕೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅಲ್ಲಿ ಅಕ್ರಮ ನಡೆದಿದೆ ಎಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ನಾನೂ ಮತ್ತು ವೈಜನಾಥ್ ಪಾಟೀಲ್ ಒಂದೇ ಊರಿನವರಲ್ಲ. ನಾನು ಗುರುಮಿಠಕಲ್‌ದವನಾದರೆ,